# ಕಲಿಕಾ ಚೇತರಿಕೆ ಉಪಕ್ರಮ

# ಮೌಲ್ಯಮಾಪನ ಚಟುವಟಿಕೆ ಹಾಳೆಗಳು

## ಪ್ರಥಮ ಭಾಷೆ ಸಿರಿ ಕನ್ನಡ

## 9ನೇ ತರಗತಿ



| | |
|---|---|
| ಹೆಸರು | |
| ವಿಭಾಗ | |
| ಹಾಜರಾತಿ ಸಂಖ್ಯೆ | |
| ಗುಂಪು | |

ಬಾಲಕಿಯರ ಸರ್ಕಾರಿ ಪ್ರೌಢಶಾಲೆ

ಹರಪನಹಳ್ಳಿ ವಿಜಯನಗರ ಜಿಲ್ಲೆ

## ಮೌಲ್ಯಮಾಪನ ಚಟುವಟಿಕೆ
## ಕಲಿಕಾ ಫಲ–1

**ಕೆಳಗಿನ ಸನ್ನಿವೇಶವನ್ನು ಓದಿ, ಕೆಳಗಿನ ಪ್ರಶ್ನೆಗೆ ಉತ್ತರಿಸಿ. ತರಗತಿಯಲ್ಲಿ ಮಂಡಿಸುವುದು.**

ರಂಗಣ್ಣ ಮತ್ತು ಸುಂದ್ರಮ್ಮನದು ಒಂದು ಸುಂದರ ಸಂಸಾರವಾಗಿತ್ತು. ಇವರಿಬ್ಬರಿಗೆ ಹರ್ಷನೆಂಬ ಮಗನಿದ್ದನು. ಇವನನ್ನು ಕಂಡರೆ ಸುಂದ್ರಮ್ಮನಿಗೆ ಬಹಳ ಅಚ್ಚುಮೆಚ್ಚು. ಈತನು ಕಾಲೇಜಿನಲ್ಲಿ ಓದುವಾಗ ಹರ್ಷಿಣಿ ಎಂಬ ಬಡ ಹುಡುಗಿಯನ್ನು ಪ್ರೀತಿಸಿ ಮದುವೆಯಾಗಿ ಮನೆಗೆ ಕರೆತಂದನು. ವರದಕ್ಷಿಣೆ ಇಲ್ಲದೆ ಮದುವೆಯಾದ ಮಗನ ಬಗ್ಗೆ ಬೇಸರ ವ್ಯಕ್ತಪಡಿಸಿ, ಒಲ್ಲದ ಮನಸ್ಸಿನಿಂದ ಸುಂದ್ರಮ್ಮ ಸೊಸೆಯನ್ನು ಮನೆ ತುಂಬಿಸಿಕೊಂಡಳು. ದಿನ ಕಳೆದಂತೆ ಹರ್ಷನು ಕೆಲಸದಲ್ಲಿ ನಿರತನಾಗಿ ಮನೆಯ ಕಡೆ ಅಷ್ಟು ಗಮನಹರಿಸುತ್ತಿರಲಿಲ್ಲ. ಸುಂದ್ರಮ್ಮ ಮತ್ತು ರಂಗಣ್ಣ ತನ್ನ ಸೊಸೆಯನ್ನು ಮೊದಮೊದಲು ಬಹಳ ಚೆನ್ನಾಗಿ ನೋಡಿಕೊಳ್ಳುವಂತೆ ನಟಿಸುತ್ತಿದ್ದರು. ಕಾಲ ಕ್ರಮೇಣ ಸುಂದ್ರಮ್ಮ ಸೊಸೆಗೆ ಚುಚ್ಚು ಮಾತುಗಳನ್ನಾಡಲು ಪ್ರಾರಂಭಿಸಿದಳು. ಈ ವಿಚಾರವನ್ನು ಹರ್ಷಿಣಿಯು, ಹರ್ಷನಿಗೆ ಹೇಳಿದರೂ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಮುಂದುವರೆದು ಸುಂದ್ರಮ್ಮ ನೇರವಾಗಿ ಸೊಸೆಯನ್ನು ನಿಂದಿಸುವುದು ಮತ್ತು ದೈಹಿಕ ದಂಡನೆ ಮಾಡತೊಡಗಿದಳು. ಅಲ್ಲದೆ ಹೆಚ್ಚು ಕೆಲಸಗಳನ್ನು ನೀಡುವುದು, ಎಲ್ಲಾ ಕೆಲಸದಲ್ಲೂ ತಪ್ಪು ಹುಡುಕಿ ದೈಹಿಕ ದಂಡನೆ ನೀಡುವುದು ಹಾಗೂ ಮಾನಸಿಕ ಹಿಂಸೆ ಕೊಡಲು ಪ್ರಾರಂಭಿಸಿದಳು. ಸುಂದ್ರಮ್ಮನ ಜೊತೆಗೆ ರಂಗಣ್ಣನು ಕೈಜೋಡಿಸಲು ಪ್ರಾರಂಭಿಸಿದನು. ಇದನ್ನು ಸಾಕಷ್ಟು ಬಾರಿ ಹರ್ಷನ ಗಮನಕ್ಕೆ ತಂದರೂ ಆತ ತನ್ನ ಹೆಂಡತಿಗೆ ಬೈದು ಸುಮ್ಮನಿರಿಸುತ್ತಿದ್ದನು. ಇಷ್ಟರಲ್ಲಾಗಲೆ ಹರ್ಷಿಣಿಯು ಐದು ತಿಂಗಳ ಗರ್ಭಿಣಿಯಾಗಿದ್ದಳು. ಇದನ್ನು ಸಹಿಸದ ಸುಂದ್ರಮ್ಮ ಮತ್ತು ರಂಗಣ್ಣ ತಮ್ಮ ಸೊಸೆಗೆ ಅವಳ ಮನೆಯಿಂದ ಒಡವೆ, ಹಣ ಮತ್ತು ಆಸ್ತಿಯನ್ನು ತರುವಂತೆ ಪೀಡಿಸಲಾರಂಭಿಸಿದರು. ಇದರಿಂದ ಬೇಸತ್ತ ಸೊಸೆ ತನ್ನ ತವರುಮನೆಗೆ ವಿಚಾರ ಮುಟ್ಟಿಸಿದಳು. ಹರ್ಷಿಣಿಯ ತವರುಮನೆಯವರು ಮಗಳಿಗೆ ಸಮಾಧಾನ ಮಾಡಿ ಅನುಸರಿಸಿಕೊಂಡು ಸಂಸಾರ ನಡೆಸಲು ತಿಳಿ ಹೇಳಿ ಗಂಡನ ಮನೆಗೆ ಕಳುಹಿಸಿದರು.

**1. ಹರ್ಷಿಣಿಯು ವರದಕ್ಷಿಣೆಯ ಹಿಂಸೆಯಿಂದ ಪಾರಾಗಲು ಯಾವೆಲ್ಲಾ ಕ್ರಮವನ್ನು ಕೈಗೊಳ್ಳಬಹುದು? ಎಂಬುದನ್ನು ಆಲೋಚಿಸಿ ಬರೆಯಿರಿ.**

**2. ಹರ್ಷನ ವರ್ತನೆಯ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.**

3. **'ವರದಕ್ಷಿಣೆ ಸಾಮಾಜಿಕ ಪಿಡುಗು' ಎಂಬುದರ ಬಗ್ಗೆ ಚರ್ಚಿಸಿ, ಮುಖ್ಯಾಂಶಗಳನ್ನು ಬರೆಯಿರಿ.**

## ಮೌಲ್ಯಮಾಪನ ಸೂಚಿ

| ಕ್ರ.ಸಂ | ಮಾನಕಗಳು<br>ಅಂಕಗಳ ವಿತರಣೆ : ಅತ್ಯುತ್ತಮ–5, ಉತ್ತಮ–4, ಸಾಧಾರಣ–3 | ಗರಿಷ್ಠ ಅಂಕಗಳು | ಪಡೆದ ಅಂಕಗಳು |
|---|---|---|---|
| 1 | ಪ್ರಶ್ನೆಗಳಲ್ಲಿನ ವಿಷಯಕ್ಕನುಗುಣವಾಗಿ ಉತ್ತರಿಸಿರುವುದು. | 5 | |
| 2 | ತಾರ್ಕಿಕವಾಗಿ ಆಲೋಚಿಸಿ, ಚರ್ಚಿಸಿ ಪ್ರಶ್ನೆಗಳಿಗೆ ಉತ್ತರಿಸಿರುವುದು. | 5 | |
| 3 | ತರಗತಿಯಲ್ಲಿ ವಿಷಯಗಳನ್ನು ಮಂಡಿಸುವಾಗ ಇತರೆ ಸ್ಥಳಿಯ ಸಾಮಾಜಿಕ ಸಮಸ್ಯೆಗಳ ಅರಿವು ಇರುವುದರ ಬಗ್ಗೆ ಉಲ್ಲೇಖಿಸಿ ಮಂಡಿಸುವುದು. | 5 | |
| | ಒಟ್ಟು ಅಂಕಗಳು | 15 | |

**ಮೌಲ್ಯಮಾಪನ ಚಟುವಟಿಕೆ**
**ಕಲಿಕಾ ಫಲ–2**

**ಕೆಳಗಿನ ಕಥೆಯನ್ನು ಓದಿ, ಪ್ರಶ್ನೆಗಳಿಗೆ ಉತ್ತರಿಸಿ.**

**ಕಥೆ**

ಒಂದು ಊರಿನಲ್ಲಿ ರಾಮ ಮತ್ತು ಶ್ಯಾಮ ಎಂಬ ಇಬ್ಬರು ಆತ್ಮೀಯ ಗೆಳೆಯರಿದ್ದರು. ರಾಮ, ಒಂದಷ್ಟು ಓದಿ ವಿದ್ಯಾವಂತನಾಗಿದ್ದ. ಅವನು ತರಕಾರಿ ವ್ಯಾಪಾರದ ದಲ್ಲಾಳಿಯಾಗಿ ಕೆಲಸ ಮಾಡುತ್ತಿದ್ದ. ಕೆಲವೊಮ್ಮೆ ಸಾಕಷ್ಟು ಹಣ ಸಿಕ್ಕರೆ, ಕೆಲವೊಮ್ಮೆ ಏನೂ ಸಿಗುತ್ತಿರಲಿಲ್ಲ. ಅವನ ಗೆಳೆಯ ಶ್ಯಾಮ ಶಾಲೆ ಬಿಟ್ಟು ಓದದೆ ಅನಕ್ಷರಸ್ಥನಾಗಿದ್ದನು, ಅವನು ಮಾಂಸದ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದನು. ರಾಮನಿಗೆ ದಿನವಿಡೀ ಕೆಲಸ ಇರುತ್ತಿರಲಿಲ್ಲ. ತನ್ನ ದಲ್ಲಾಳಿ ಕೆಲಸ ಮುಗಿದ ಮೇಲೆ, ಶ್ಯಾಮನ ಅಂಗಡಿಯ ಗಲ್ಲದಲ್ಲಿ ಕುಳಿತು ಗ್ರಾಹಕರಿಂದ ತೂಕಕ್ಕೆ ತಕ್ಕಂತೆ ಹಣ ಪಡೆದು ಇಡುತ್ತಿದ್ದ ಮತ್ತು ದಿನದ ಕೊನೆಯಲ್ಲಿ ಶ್ಯಾಮನಿಗೆ ಎಣಿಸಿ, ಹಣದ ಚೀಲದಲ್ಲಿ ತುಂಬಲು ಸಹಕರಿಸುತ್ತಿದ್ದ. ಅಂದು ರಾಮ ಶ್ಯಾಮನಿಗೆ ಸಹಾಯ ಮಾಡುತ್ತಾ ಕುಳಿತಿದ್ದ. ಶ್ಯಾಮನಿಗೆ ತಿಳಿಯದಂತೆ ಒಂದು ಹಣದ ಚೀಲವನ್ನು ಕಳವು ಮಾಡಿ, ಮನೆಯಲ್ಲಿ ತನ್ನ ಹಣದ ಚೀಲದ ಜೊತೆ ಇರಿಸಿದ. ಶ್ಯಾಮ ವ್ಯಾಪಾರ ಮುಗಿಸಿ ಹಣದ ಗಲ್ಲವನ್ನು ನೋಡಿದಾಗ ಒಂದು ಹಣದ ಚೀಲ ಕಡಿಮೆಯಾಗಿರುವುದನ್ನು ಗಮನಿಸಿದ. ಅವನು ರಾಮನ ಮನೆಗೆ ಬಂದು "ನಾನು ಹಣ ಇಡುವ ಜಾಗಕ್ಕೆ ನಿನ್ನನ್ನು ಬಿಟ್ಟರೆ ಬೇರಾರೂ ಬರುವುದಿಲ್ಲ. ಆದ್ದರಿಂದ ನನ್ನ ಹಣವನ್ನು ನೀನೆ ತೆಗೆದುಕೊಂಡಿರುವೆ, ದಯವಿಟ್ಟು ಹಿಂದಿರುಗಿಸು" ಎಂದು ಕೇಳಿಕೊಂಡ. ರಾಮ ಕೋಪದಿಂದ "ಆತ್ಮೀಯ ಗೆಳೆಯ ಎಂದು ನಿನಗೆ ಸಹಾಯ ಮಾಡಿದರೆ, ನನ್ನ ಮೇಲೆ ಅನುಮಾನ ಪಡುತ್ತೀಯಾ?" ಎಂದು ಕೂಗುತ್ತಾ "ಮನೆಯಿಂದ ಹೊರನಡೆ" ಎಂದು ಗಲಾಟೆ ಮಾಡಿದ. ಶ್ಯಾಮನು ಯೋಚಿಸುತ್ತಾ ತನ್ನ ಮನೆಯ ಕಡೆ ಹೋಗುತ್ತಿರುವಾಗ, ದಾರಿಯಲ್ಲಿ ಊರಿನ ನ್ಯಾಯಾಧೀಶೆ ಅಡ್ಡ ಬಂದರು ಮತ್ತು ಅವನ ಚಿಂತೆಗೆ ಕಾರಣವೇನು? ಎಂದು ಕೇಳಿದರು. ಶ್ಯಾಮ ನಡೆದ ವಿಷಯವನ್ನೆಲ್ಲಾ ವಿವರಿಸಿದಾಗ, ನ್ಯಾಯಾಧೀಶೆ ಅವನನ್ನು ರಾಮನ ಮನೆಗೆ ಕರೆದುಕೊಂಡು ಬಂದರು, ರಾಮನು ಶ್ಯಾಮನಿಗೆ ಮೋಸ ಮಾಡಿರುವ ಬಗ್ಗೆ ರಾಮನನ್ನು ಪ್ರಶ್ನಿಸಿದಾಗ, ರಾಮನು ತನ್ನ ಬಳಿ ಇದ್ದ ಹಣವನ್ನು ತೋರಿಸುತ್ತಾ ಇದು ನನ್ನ ಹಣ. ಅವನ ಹಣವಾಗಿದ್ದರೆ, ಈ ಚೀಲದಲ್ಲಿ ಎಷ್ಟಿದೆ ಎಂಬುದನ್ನು ಅವನನ್ನೇ ಕೇಳಿ ಎಂದ. ಆಗ ಶ್ಯಾಮ "ಅದರಲ್ಲಿ ಎಷ್ಟಿದೆ ಎಂದು ಗೊತ್ತಿಲ್ಲ, ಆದರೆ ಅದು ನನ್ನದೇ ಹಣ" ಎಂದನು. ಅವನ ಧ್ವನಿಯಲ್ಲಿ ಪ್ರಾಮಾಣಿಕತೆ ಇತ್ತು. ಇತ್ತ ರಾಮ "ನಾನು 200 ನಾಣ್ಯಗಳನ್ನು ಇಟ್ಟಿದ್ದೇನೆ ಎಣಿಸಿ ನೋಡಿ ಎಂದು ಹೇಳಿದ. ಎಣಿಸಲಾಗಿ ಅವನು ಹೇಳಿದ್ದು ಸರಿ ಇತ್ತು. ಯೋಚಿಸಿದ ನ್ಯಾಯಾಧೀಶೆ "ಸರಿ, ಹಣದ ಚೀಲಗಳನ್ನು ನನಗೆ ಕೊಡಿ, ಯಾರಿಗೂ ಅನ್ಯಾಯವಾಗದಂತೆ ನಾನು ನಾಳೆ ನಿಮಗೆ ನ್ಯಾಯ ತೀರ್ಮಾನ ನೀಡುತ್ತೇನೆ" ಎಂದು ತಿಳಿಸಿ ಚೀಲವನ್ನು ತೆಗೆದುಕೊಂಡು ಮನೆಗೆ ಬಂದರು. ಹೇಗೇ ಲೆಕ್ಕ ಹಾಕಿದರೂ 200 ನಾಣ್ಯಗಳಿದ್ದವು. ಶ್ಯಾಮನ ಮಾತಿನಲ್ಲಿ ನೈಜತೆ ಇದ್ದರೂ ಅವನಿಗೆ ನ್ಯಾಯ ಸಿಗುವುದಿಲ್ಲ ಎನಿಸತೊಡಗಿತು. ಹಾಗೆಯೇ ಯೋಚಿಸುತ್ತಾ ಕುಳಿತಿದ್ದಳು.

**ಪ್ರಶ್ನೆಗಳು:**

1.ರಾಮ ಅಥವಾ ಶ್ಯಾಮ ಇಬ್ಬರಲ್ಲಿ ಒಬ್ಬರ ಜೀವನದ ನಡವಳಿಕೆಯ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

2. ನೀನು ನ್ಯಾಯಾಧೀಶೆಯ ಸ್ಥಾನದಲ್ಲಿ ಇದ್ದಿದ್ದರೆ ಏನು ಮಾಡುತ್ತಿದ್ದೆ? ಎಂಬುದನ್ನು ಬರೆಯಿರಿ.

3. 'ಗೆಳೆತನದಲ್ಲಿ ನಂಬಿಕೆ ದ್ರೋಹ ಮಾಡುವುದು ತಪ್ಪು' ಎಂಬ ಹೇಳಿಕೆಯನ್ನು ಸಮರ್ಥಿಸಿಕೊಂಡು ಬರೆಯಿರಿ.

## ಮೌಲ್ಯಮಾಪನ ಸೂಚಿ

| ಕ್ರ.ಸಂ | ಮಾನಕಗಳು<br>ಅಂಕಗಳ ವಿತರಣೆ : ಅತ್ಯುತ್ತಮ–5, ಉತ್ತಮ–4, ಸಾಧಾರಣ–3 | ಗರಿಷ್ಠ ಅಂಕಗಳು | ಪಡೆದ ಅಂಕಗಳು |
|---|---|---|---|
| 1 | ರಾಮ ಅಥವಾ ಶ್ಯಾಮರ ನಡಾವಳಿಕೆಗಳನ್ನು ಗ್ರಹಿಸಿಕೊಂಡು ಬರೆದಿರುವುದು. | 5 | |
| 2 | ಉತ್ತರಗಳು ತಾರ್ಕಿಕವಾಗಿ, ವಿಮರ್ಶಾತ್ಮಕವಾಗಿ, ಸೃಜನಾತ್ಮಕವಾಗಿ ಇವೆ. | 5 | |
| 3 | ಬರವಣಿಗೆಯ ಶೈಲಿ (ಪದ ಬಳಕೆ ಮತ್ತು ವಾಕ್ಯ ರಚನೆ, ವಿಚಾರಗಳು) | 5 | |
| | ಒಟ್ಟು ಅಂಕಗಳು | 15 | |

**ಮೌಲ್ಯಮಾಪನ ಚಟುವಟಿಕೆ**

**ಕಲಿಕಾ ಫಲ – 3**

**ಅ) 9ನೇ ತರಗತಿಯ ಪ್ರಜಾನಿಷ್ಠೆ, ಗುರು ಕರುಣೆ, ಸಿರಿಯನಿನ್ನೇನ ಬಣ್ಣಿಪೆನು, ಕನ್ನಡ ನಾಡು ನುಡಿ ಪಾಠಗಳಲ್ಲಿನ 30 ಹೊಸ ಪದಗಳನ್ನು ಆರಿಸಿ ಶಬ್ದಕೋಶದ ಸಹಾಯದಿಂದ ಅರ್ಥ ಹುಡುಕಿ ಅಕರಾದಿಯಾಗಿ ಬರೆಯಿರಿ.**

| | |
|---|---|
| | |
| | |
| | |
| | |
| | |
| | |
| | |
| | |
| | |
| | |
| | |
| | |
| | |
| | |
| | |
| | |
| | |
| | |
| | |

ಆ) ಗ್ರಂಥಾಲಯದಲ್ಲಿನ ಪುಸ್ತಕವೊಂದನ್ನು ಪಡೆದು ಓದಿ, ಈ ಕೆಳಗಿನ ಮಾಹಿತಿಯನ್ನು ಬರೆಯಿರಿ

| |
|---|
| ಪುಸ್ತಕದ ಹೆಸರು : |
| ಲೇಖಕರು/ಕವಿಯ ಹೆಸರು : |
| ಪುಸ್ತಕದಲ್ಲಿನ ವಿಷಯ : |
| |
| ಪುಸ್ತಕವನ್ನು ಕುರಿತು ಅಭಿಪ್ರಾಯಗಳು : |
| |
| |
| |
| |
| |
| |
| |
| |
| |
| |
| |
| |
| |
| |

ಇ) ಅಂತರ್ಜಾಲ ಅಥವಾ ಗ್ರಂಥಾಲಯದ ಸಹಾಯದಿಂದ ಈ ಕೆಳಗಿನ ವಿಷಯಗಳ ಮಾಹಿತಿ ಸಂಗ್ರಹಿಸಿ ಬರೆಯಿರಿ.

1. ಜಂತರ್ ಮಂತರ್ (ಖಗೋಳ ವೀಕ್ಷಣಾಲಯ)

2. ಶ್ರವಣಬೆಳಗೊಳ

3. ಪ್ರಾಸ ಮತ್ತು ಅದರ ವಿಧಗಳು

**ಮೌಲ್ಯಮಾಪನ ಸೂಚಿ**

| ಕ್ರ.ಸಂ | ಮಾನಕಗಳು<br>ಅಂಕಗಳ ವಿತರಣೆ : ಅತ್ಯುತ್ತಮ–5, ಉತ್ತಮ–4, ಸಾಧಾರಣ–3 | ಗರಿಷ್ಠ ಅಂಕಗಳು | ಪಡೆದ ಅಂಕಗಳು |
|---|---|---|---|
| 1 | ಹೊಸ ಪದಗಳ ಆಯ್ಕೆ, ಅರ್ಥ ಸಹಿತ ಅಕರಾದಿಯಾಗಿ ಜೋಡಣೆ | 5 | |
| 2 | ಪುಸ್ತಕ ಓದಿನ ಮಾಹಿತಿ ವಿವರಣೆ | 5 | |
| 3 | ಗ್ರಂಥಾಲಯ ಅಥವಾ ಅಂತರ್ಜಾಲದಿಂದ ವಿಷಯಗಳ ಮಾಹಿತಿ ಸಂಗ್ರಹ | 5 | |
| | ಒಟ್ಟು ಅಂಕಗಳು | 15 | |

**ಮೌಲ್ಯಮಾಪನ ಚಟುವಟಿಕೆ**
**ಕಲಿಕಾ ಫಲ – 4**

**ಅ) ಸಾಮಾಜಿಕ ಮೌಲ್ಯಗಳನ್ನು ಪ್ರತಿಪಾದಿಸುವ (ಉದಾ: ಪ್ರೀತಿ, ಸ್ನೇಹ, ಸತ್ಯ, ಪ್ರಾಮಾಣಿಕತೆ, ನ್ಯಾಯ, ಸಮಾನತೆ, ಮಾನವೀಯತೆ ಇತ್ಯಾದಿ) ಯಾವುದಾದರೂ ಚಿಕ್ಕ ಕಥೆಯೊಂದನ್ನು ಸಂಗ್ರಹಿಸಿ ಬರೆದು ತರಗತಿಯಲ್ಲಿ ಪ್ರಸ್ತುತಪಡಿಸಿರಿ.**

**ಅ) ಕೆಳಗೆ ತಿಳಿಸಿರುವ ಜನಪದ ಕಲೆಗಳಲ್ಲಿನ ವೇಷಭೂಷಣಗಳ ಕುರಿತು ಚರ್ಚಿಸಿ ಬರೆದು ತರಗತಿಯಲ್ಲಿ ಪ್ರಸ್ತುತಿಪಡಿಸಿ.**

1. ವೀರಗಾಸೆ

2. ಯಕ್ಷಗಾನ

**ಮೌಲ್ಯಮಾಪನ ಸೂಚಿ**

| **ಕ್ರ.ಸಂ** | **ಮಾನಕಗಳು**<br>**ಅಂಕಗಳ ವಿತರಣೆ : ಅತ್ಯುತ್ತಮ–5, ಉತ್ತಮ–4, ಸಾಧಾರಣ–3** | **ಗರಿಷ್ಠ ಅಂಕಗಳು** | **ಪಡೆದ ಅಂಕಗಳು** |
|---|---|---|---|
| 1 | ಸಂಗ್ರಹಿಸಿದ ಕಥೆಯಲ್ಲಿ ಸಾಮಾಜಿಕ ಮೌಲ್ಯಗಳ ಪ್ರತಿಪಾದನೆ | 5 | |
| 2 | ಜನಪದ ಕಲೆಗಳಲ್ಲಿನ ವೇಷಭೂಷಣಗಳ ಮಾಹಿತಿ ಸಂಗ್ರಹ | 5 | |
| 3 | ವಿಷಯಗಳ ಪ್ರಸ್ತುತಿಯಲ್ಲಿ ನಿರರ್ಗಳತೆ, ನಿರ್ಭಯ, ಉಚ್ಚಾರದ ಸ್ಪಷ್ಟತೆ | 5 | |
| | ಒಟ್ಟು ಅಂಕಗಳು | 15 | |

**ಮೌಲ್ಯಮಾಪನ ಚಟುವಟಿಕೆ**

**ಕಲಿಕಾ ಫಲ – 5**

**ಅ) ಕೆಳಗೆ ನೀಡಿರುವ ಸಾಹಿತ್ಯ ಪ್ರಕಾರಗಳ ಲಕ್ಷಣಗಳನ್ನು ಪಟ್ಟಿ ಮಾಡಿ, ಪ್ರತಿ ಸಾಹಿತ್ಯ ಪ್ರಕಾರಕ್ಕೂ ಐದೈದು ಉದಾಹರಣೆ ನೀಡಿರಿ.**

1. ಗಾದೆ

2. ನಾಟಕ

3. ಆತ್ಮಚರಿತ್ರೆ

4. ಪ್ರವಾಸ ಸಾಹಿತ್ಯ

**5. ಸಣ್ಣ ಕಥೆ**

**6. ಕವನ**

**ಆ) 9ನೇ ತರಗತಿಯಲ್ಲಿರುವ 'ಪಾರಿವಾಳ' ಕಥನ ಕವನವನ್ನು ಕಥೆಯ ರೂಪಕ್ಕೆ ಪರಿವರ್ತಿಸಿ ಬರೆಯಿರಿ.**

**ಮೌಲ್ಯಮಾಪನ ಸೂಚಿ**

| **ಕ್ರ.ಸಂ** | **ಮಾನಕಗಳು**<br>**ಅಂಕಗಳ ವಿತರಣೆ : ಅತ್ಯುತ್ತಮ–5, ಉತ್ತಮ–4, ಸಾಧಾರಣ–3** | **ಗರಿಷ್ಠ ಅಂಕಗಳು** | **ಪಡೆದ ಅಂಕಗಳು** |
|---|---|---|---|
| 1 | ಸಾಹಿತ್ಯ ಪ್ರಕಾರಗಳ ಲಕ್ಷಣಗಳ ಪಟ್ಟಿ ತಯಾರಿಕೆ | 5 | |
| 2 | ಪ್ರತಿ ಸಾಹಿತ್ಯ ಪ್ರಕಾರಕ್ಕೆ ಉದಾಹರಣೆಗಳ ನೀಡುವಿಕೆ | 5 | |
| 3 | ಪಾರಿವಾಳ ಕಥನ ಕವನವನ್ನು ಕಥೆಯ ರೂಪಕ್ಕೆ ಪರಿವರ್ತನೆ | 5 | |
| | ಒಟ್ಟು ಅಂಕಗಳು | 15 | |

**ಮೌಲ್ಯಮಾಪನ ಚಟುವಟಿಕೆ**
**ಕಲಿಕಾ ಫಲ – 6**

**ಅ) ಒಂದು ದಿನದ ನಿಮ್ಮ ದಿನಚರಿ ಬರೆಯಿರಿ.**

**ಆ) ಕೋವಿಡ್ –19ರ ಅವಧಿಯಲ್ಲಿ ನೀವು ಅನುಭವಿಸಿದ ಅಥವಾ ನಿಮ್ಮ ಅನುಭವಕ್ಕೆ ಬಂದ ಯಾವುದಾದರೊಂದು ಸಂಗತಿಯನ್ನು ನಿಮ್ಮದೇ ಮಾತುಗಳಲ್ಲಿ ಬರೆಯಿರಿ.**

| |
|---|
| |
| |
| |
| |
| |
| |
| |
| |
| |
| |
| |
| |
| |
| |

**ಮೌಲ್ಯಮಾಪನ ಸೂಚಿ**

| ಕ್ರ.ಸಂ | ಮಾನಕಗಳು<br>ಅಂಕಗಳ ವಿತರಣೆ : ಅತ್ಯುತ್ತಮ–5, ಉತ್ತಮ–4, ಸಾಧಾರಣ–3 | ಗರಿಷ್ಠ ಅಂಕಗಳು | ಪಡೆದ ಅಂಕಗಳು |
|---|---|---|---|
| 1 | ಲಕ್ಷಣಗಳನ್ನೊಳಗೊಂಡಂತೆ ದಿನಚರಿ ಬರೆವಣಿಗೆ | 5 | |
| 2 | ಕೋವಿಡ್–19 ಅವಧಿಯಲ್ಲಿ ತಮ್ಮ ಅನುಭವಿಸಿದ ಅಥವಾ ನಿಮ್ಮ ಅನುಭವಕ್ಕೆ ಬಂದ ಸಂಗತಿಯ ಬರವಣಿಗೆ | 5 | |
| 3 | ಪದ ಬಳಕೆ, ವಾಕ್ಯ ರಚನಾ ಶೈಲಿ | 5 | |
| | ಒಟ್ಟು ಅಂಕಗಳು | 15 | |